






# ಪ್ರಪಂಚದ ಪುಟ್ಟ ಅಂಚೆ

ಪ್ರಪಂಚದಲ್ಲೇ ಅತ್ಯಂತ ಪುಟ್ಟ ಅಂಚೆ ಸೇವೆಯ ಬಗ್ಗೆ ಆಲೋಚನೆ ಬಂದದ್ದು ಸ್ಯಾನ್ ಫ್ರಾನ್ಸಿಸ್ಕೊ ಮೂಲದ ಲಿಯಾ ರೆಡಾಂಡ್ ಎಂಬ ಪೋಸ್ಟ್ ಮಿಸ್ಟ್ರೆಸ್ ಹಾಗೂ ಕಲಾವಿದೆಯ ಮನದಲ್ಲಿ. ಹಲವು ವರ್ಷಗಳ ಹಿಂದೆ ಬಂದ ಈ ಆಲೋಚನೆ ಈಗಲೂ ಕಾರ್ಯರೂಪದಲ್ಲಿ ನಡೆಯುತ್ತಿದೆ.

ಇಲ್ಲಿ ನೀವು ನೀಡಿದ ಸಂದೇಶಗಳು (120 ಪದ ಮಿತಿ) ರೆಡಾಂಡ್‌ಳ ಮೈಕ್ರೊಟಿಪ್ ಪೆನ್ ನಲ್ಲಿ, 2.5*4 ಸೆಂ.ಮೀ ಅಳತೆಯ ಪುಟ್ಟ ಪತ್ರವಾಗಿ ಮೈದಳೆದು, ಅದನ್ನು ಮಿನಿಯೇಚರ್ ಎನ್‌ವೆಲಪ್‌ನಲ್ಲಿ ಜಾಗರೂಕವಾಗಿ ಹಾಕಲಾಗುತ್ತದೆ. ನಂತರ ಕಳಿಸುವವರ ಹೆಸರಿನ ಅಕ್ಷರದ ಮುದ್ರೆಯೊತ್ತಿ ಸೀಲ್ ಮಾಡಲಾಗುತ್ತದೆ. ಈ ಪುಟ್ಟ ಪತ್ರದಲ್ಲಿನ ವಿಳಾಸವು ಸ್ಪಷ್ಟವಾಗಿ ಕಾಣಲೆಂದು ವಿಶೇಷ ರೀತಿಯ ಭೂತಕನ್ನಡಿ ಇರುವ ಪಾರದರ್ಶಕ ಕವರ್‌ನಲ್ಲಿಟ್ಟು ಸಾಮಾನ್ಯ ಅಂಚೆಯಂತೆ ಪೋಸ್ಟ್ ಮಾಡಲಾಗುತ್ತದೆ.

■ ವಿದ್ಯಾ ಹಾಲಭಾವಿ

